ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ವಾಣಿವಿಲಾಸ ಸಕ್ಕರೆ ಕಾರ್ಖಾನೆ ಕೆಲಸ ಸ್ಥಗಿತ

30 - ಶ್ರೀ ಇಲ್ಕಲ್ ವಿಜಯ ಕುಮಾರ್ (ಹೊಸದುರ್ಗ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆ ಹಿರಿಯೂರಿನ ವಾಣಿ ವಿಲಾಸ ಸಕ್ಕರೆ ಕಾರ್ಖಾನೆಯು ಕೆಲಸ ಮಾಡದೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸ್ಥಗಿತಗೊಂಡಿದ್ದಲ್ಲಿ ಕಾರ್ಖಾನೆಯು ನಿಲುಗಡೆಯಾಗಲು ಪ್ರಬಲವಾದ ಕಾರಣಗಳೇನು? ಹಾಗೂ ಕಾರ್ಖಾನೆಯನ್ನು ಪ್ರಾರಂಭಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಸದರಿ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಲು ಸರ್ಕಾರವೇನಾದರೂ ಪರಿಶೀಲಿಸುತ್ತಿದೆಯೇ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು)

ಅ) ಹೌದು.

ಆ) ಕಾರ್ಖಾನೆಯ ಕಾರ್ಯ ಕ್ಷೇತ್ರದಲ್ಲಿ ಸಾಕಷ್ಟು ಕಬ್ಬು ದೊರಕದೇ ಇರುವುದೇ ಕಾರ್ಖಾನೆ ನಿಲುಗಡೆಯಾಗಲು ಮುಖ್ಯ ಕಾರಣ. ಕಾರ್ಖಾನೆಯ ಭವಿಷ್ಯದ ಬಗ್ಗೆ ಸರ್ಕಾರ ತೀವ್ರ ಪರಿಶೀಲಿಸುತ್ತಿದೆ.

ಇ) ಇಲ್ಲ.

ಅಂತರರಾಷ್ಟ್ರೀಯ ಪ್ರವಾಸೋದ್ಯಮದ ಬಗ್ಗೆ

29 - ಶ್ರೀ ಇಲ್ಕಲ್ ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂತರ ರಾಷ್ಟ್ರೀಯ ಪ್ರವಾಸೋದ್ಯಮ ವರ್ಷವಾದ ಈ ಸಾಲಿನಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಆ) ರಾಜ್ಯ ಸರ್ಕಾರವು ಪ್ರವಾಸ ಬಸ್ಸುಗಳಿಗೆ ಪರ್ಮಿಟ್ ನೀಡದ ಕಾರಣ ರಾಜ್ಯದಲ್ಲಿ ಸಂಚರಿಸುವ ವಿದೇಶಿ ಪ್ರವಾಸಿಗರಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಪ್ರವಾಸಿ ಬಸ್ಸುಗಳಿಗೆ ಪರ್ಮಿಟ್ ನೀಡದ ಕಾರಣ ಸರ್ಕಾರದ ಬೊಕ್ಕಸಕ್ಕೆ ಬರುತ್ತಿದ್ದ ಲಕ್ಷಾಂತರ ರೂಪಾಯಿಗಳ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) ಸಾರಿಗೆ ಸಂಸ್ಥೆಯು ಒಪ್ಪಂದದ ಮೇರೆಗೆ ವಾಹನಗಳನ್ನು ಪ್ರವಾಸಿಗರಿಗೆ ಅವರ ಕೋರಿಕೆಯ ಮೇರೆಗೆ ನೀಡುತ್ತಿದೆ.

ಆ) ಇಲ್ಲ.

ಇ) ಮೇಲಿನ (ಆ) ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಮೂಡಬಿದರೆ ಸಬ್-ಸ್ಟೇಷನ್ ಕುರಿತು

319 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆ ಸಬ್-ಸ್ಟೇಷನ್‌ಗೆ ಕಾಮಗಾರಿ ಕೆಲಸಗಳು ಮಂದಗತಿಯಲ್ಲಿರಲು ಕಾರಣವೇನು ?

ಆ) ಹಾಗಿದ್ದಲ್ಲಿ ವಿದ್ಯುತ್ ಕೊರತೆಯ ಬಗ್ಗೆ ಅಲ್ಲಿನ ಜನರ ಪ್ರತಿಭಟನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಆದರ ಕೆಲಸ ಯಾವಾಗ ಪೂರ್ಣಗೊಳ್ಳುವುದು.

ಈ) ಇಲ್ಲಿಯ ವಿದ್ಯುತ್ ವೈಫಲ್ಯ ಸರಿಪಡಿಸಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) ಮೂಡಬಿದರೆ ಸಬ್-ಸ್ಟೇಷನ್ ಸ್ಥಳವು ಅತಿ ಗಟ್ಟಿಯಾದ ಕಲ್ಲುಗಳಿಂದ (ಲ್ಯಾಟರೈಟ್) ಕೂಡಿರುವುದರಿಂದ ಸಮತಟ್ಟು ಮಾಡುವ ಕೆಲಸವು ನಿಧಾನವಾಗಿ ಸಾಗುತ್ತಿದೆ. ಈ ಕಾರಣದಿಂದ ಸಂಬಂಧಿಸಿದ ಕೆಲಸಗಳು ಸ್ವಲ್ಪಮಟ್ಟಿಗೆ ಮಂದಗತಿಯಲ್ಲಿ ಸಾಗುತ್ತಿದೆ.

ಆ) ಹೌದು.

ಇ) ಆಗಸ್ಟ್ 92ರ ಅಂತ್ಯದ ವೇಳೆಗೆ ನಿರ್ಮಾಣ ಕೆಲಸ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ಈ) ಈ ವಿದ್ಯುತ್ ಸಬ್-ಸ್ಟೇಷನ್ ಕಾರ್ಯಾರಂಭ ಮಾಡಿದ ನಂತರ ವಿದ್ಯುತ್ ಸರಬರಾಜಿನ ಪರಿಸ್ಥಿತಿಯಲ್ಲಿ ಸಾಕಷ್ಟು ಸುಧಾರಣೆಯಾಗಲಿದೆ.

ಮುಲ್ಕಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸುವಿಹಾರಿ ಬಸ್ಸು.

322 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೂಲ್ಕಿಗೆ ಸುವಿಹಾರಿ ಬಸ್ಸಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸುವಿಹಾರಿ ಬಸ್ಸನ್ನು ಹಾಕುವ ಮತ್ತು ಛೇರ್ ಸ್ಪೇಜ್ ಕೊಡುವ ಕಾರ್ಯಕ್ರಮ ಸಂಸ್ಥೆಯ ಮುಂದಿದೆಯೇ ?

ಇ) ಇದರ ಬಗ್ಗೆ ಸರ್ಕಾರಕ್ಕೆ ಮನವಿಗಳು ಬಂದಿರುವುದೇ?

ಈ) ಮುಲ್ಕಿ ಪುರಸಭೆಯವರು ಎಲ್ಲಾ ರೀತಿಯ ಸೌಕರ್ಯ ಕೊಡುವುದಿದ್ದರೂ ಸರ್ಕಾರ ಇನ್ನೂ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ಮತ್ತು ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಸದ್ಯದಲ್ಲಿ ಈ ಬಗ್ಗೆ ಯಾವುದೇ ಯೋಜನೆ ಇರುವುದಿಲ್ಲ.

ಇ) ಹೌದು

ಈ) ಈ ವಿಷಯವನ್ನು ಈಗಾಗಲೇ ಪರಿಶೀಲಿಸಿರುವುದರಿಂದ ಮುಂದಿನ ಕ್ರಮದ ಅಗತ್ಯ ಇರುವುದಿಲ್ಲ.